# ಹಿರಿಯ ಸಚಿವರು ಉಗಿದಿದ್ದಕ್ಕೆ ರಾತ್ರಿ ಕರ್ಫ್ಯೂ ವಾಪಸ್: ಡಿಕೆಶಿ

• **ಕನ್ನಡಪ್ರಭ ವಾರ್ತೆ** ಬೆಂಗಳೂರು

ರಾತ್ರಿ ಕರ್ಫ್ಯೂ ವಿಧಿಸುವ ಆಲೋಚನೆ ಯಡಿಯೂರಪ್ಪ ಅವರದ್ದಲ್ಲ. ಅದು ಆರೋಗ್ಯ ಸಚಿವ ಸುಧಾಕರ್ ಅವರದು. ಈ ಸಚಿವ ಹೇಳಿದ ಅಂತಾ ರಾತ್ರಿ ಕರ್ಫ್ಯೂ ತೀರ್ಮಾನ ಕೈಗೊಂಡಿರುವ ಮುಖ್ಯಮಂತ್ರಿ ಬಿ.ಎಸ್. ಯಡಿಯೂರಪ್ಪ ಏಕೆ ಇಷ್ಟು ವೀಕ್ ಆಗಿದ್ದಾರೆ?



ಹೀಗಂತ ಪ್ರಶ್ನಿಸಿದ್ದಾರೆ ಕೆಪಿಸಿಸಿ ಅಧ್ಯಕ್ಷ ಡಿ.ಕೆ. ಶಿವಕುಮಾರ್. ಶುಕ್ರವಾರ ಸದಾಶಿವನಗರದ ತಮ್ಮ ನಿವಾಸದ ಬಳಿ ಸುದ್ದಿಗಾರರೊಂದಿಗೆ ಮಾತನಾಡಿದ ಅವರು, ಯಾವ ಮಂತ್ರಿ, ಶಾಸಕರ ಜತೆಯೂ ಈ ಬಗ್ಗೆ ಚರ್ಚಿಸದೇ ಈ ಒಬ್ಬ ಸಚಿವ ಹೇಳಿದ ಎಂದು ರಾತ್ರಿ ಕರ್ಫ್ಯೂ ನಿರ್ಧಾರ ಕೈಗೊಂಡಿದ್ದಾರೆ. ಸಾಮಾನ್ಯ ಜ್ಞಾನ ಇರುವ ಯಾರೂ ಇಂತಹ ನಿರ್ಧಾರಕೈಗೊಳ್ಳುವುದಿಲ್ಲ. ಈ ಬಗ್ಗೆ ಸರ್ಕಾರದ ಹಿರಿಯ ಮಂತ್ರಿಗಳು ಹಾಗೂ ಪಕ್ಷದ ಮುಖಂಡರು ಉಗಿದ ನಂತರ ಹಿಂಪಡೆದಿದ್ದಾರೆ ಎಂದು ಟೀಕಿಸಿದರು. ಹಗಲಲ್ಲಿ ಸೋಂಕು ಬರಲ್ಲ, ರಾತ್ರಿ ವೇಳೆ ಸೋಂಕು ಬರುತ್ತದೆಯೆ? ರಾತ್ರಿ 11 ಗಂಟೆಮೇಲೆಯಾರುಓಡಾಡುತ್ತಾರೆ? ಇದು ಸಾಮಾನ್ಯ ಜ್ಞಾನ. ಇದರಲ್ಲಿ ಯಾವುದೇ ವಿಜ್ಞಾನ ಅಡಗಿಲ್ಲ. ಒಂದು ವೇಳೆ ಯಾರಾದರೂ ತಜ್ಞರು ಇಂತಹ ಸಲಹೆ ನೀಡಿದ್ದರೆ ಅವರ ಫೋಟೋ ಕೊಡಿ, ಮನೆಯಲ್ಲಿ ಹಾಕಿಕೊಳ್ಳುತ್ತೇನೆ ಎಂದು ವ್ಯಂಗ್ಯವಾಡಿದರು.

ಇನ್ನು ಸುಧಾಕರ್ ಅವರು ನೀಡಿದ 'ಬೇಲ್ ಪಡೆದವರ ಸರ್ಟಿಫಿಕೇಟ್' ಹೇಳಿಕೆಗೆ ಪ್ರತಿಕ್ರಿಯಿಸಿದ ಅವರು, ಮುಖ್ಯಮಂತ್ರಿ ಬಿ.ಎಸ್. ಯಡಿಯೂರಪ್ಪ ಸೇರಿದಂತೆ ಈಗಿನ ದೊಡ್ಡ ನಾಯಕರು, ಎಷ್ಟು ಮಂತ್ರಿಗಳು ಬೇಲ್ ತಗೆದುಕೊಂಡಿದ್ದಾರೆ ಎಂಬುದನ್ನು ನೋಡಿದ್ದೇವೆ. ಕಾಲವೇ ಉತ್ತರ ಕೊಡುತ್ತದೆ ಎಂದರು.

ಸರ್ಕಾರ ನಾಗರಿಕರಿಗೆ ಔಷಧಿ, ಅಗತ್ಯ ಸೌಲಭ್ಯ ಕಲ್ಪಿಸಬೇಕು. ನಷ್ಟಕ್ಕೆ ಒಳಗಾದವರಿಗೆ ಪರಿಹಾರ ನೀಡಲಿ ಎಂದೂ ಒತ್ತಾಯಿಸಿದರು.

## ಅನಾಹುತದ ಹೊಣೆ ಪ್ರತಿಪಕ್ಷ ಹೊರುತ್ತಾ?

ಬೆಂಗಳೂರು: ಹೊಸ ವರ್ಷದಂದು ಯುವ ಜನತೆ ಮೋಜು ಮಸ್ತಿ ಮಾಡಲೇಬೇಕು ಎನ್ನುವಂತೆ ಪ್ರತಿಪಕ್ಷದ ಮುಖಂಡರು ವ್ಯಾಖ್ಯಾನ ಮಾಡಿದ್ದು, ಜನರಿಗೆ ತೊಂದರೆಯಾದರೆ ಅವರು ಜವಾಬ್ದಾರಿ ಹೊರುತ್ತಾರೆಯೇ ಎಂದು ಆರೋಗ್ಯ ಸಚಿವ ಡಾ.ಕೆ.ಸುಧಾಕರ್ ಕಟುವಾಗಿ ಪ್ರಶ್ನಿಸಿದ್ದಾರೆ. ಶುಕ್ರವಾರ ಸುದ್ದಿಗಾರರ ಜತೆ ಮಾತನಾಡಿದ ಅವರು, ದಸರಾ, ದೀಪಾವಳಿ, ಗಣೇಶ್ ಚತುರ್ಥಿ ಹಬ್ಬವನ್ನು ಸರಳವಾಗಿ ಆಚರಿಸಲಾಗಿದೆ. ಆದರೆ, ಹೊಸ ವರ್ಷದಂದು ಮೋಜು ಮಸ್ತಿ ಬೇಕೇಬೇಕು ಎಂಬಂತೆ ವಿಪಕ್ಷ ನಾಯಕರು ವ್ಯಾಖ್ಯಾನ ಮಾಡಿದ್ದಾರೆ. ಜನರಿಗೆ ತೊಂದರೆಯಾದರೆ ಅವರೇ ಜವಾಬ್ದಾರರು ಎಂದರು.

## ಭ್ರಷ್ಟಾಚಾರ ಆರೋಪಿಗಳ ಸರ್ಟಿಫಿಕೇಟ್ ನನಗೆ ಬೇಕಿಲ್ಲ

### ಡಿಕೆಶಿ ಹೇಳಿಕೆಗೆ ಡಾ.ಕೆ. ಸುಧಾಕರ್ ತಿರುಗೇಟು

ಬೆಂಗಳೂರು: ಭ್ರಷ್ಟಾಚಾರದ ಆರೋಪ ಹೊತ್ತು ಜಾಮೀನಿನ ಮೇಲೆ ಹೊರಗೆ ಇರುವವರು ನನಗೆ ಸರ್ಟಿಫಿಕೆಟ್ ನೀಡುವುದು ಬೇಡ ಎಂದು ಆರೋಗ್ಯ ಸಚಿವ ಡಾ.ಕೆ. ಸುಧಾಕರ್ ಕಾಂಗ್ರೆಸ್ಸಿನ ಡಿ.ಕೆ. ಸಹೋದರರಿಗೆ ತಿರುಗೇಟು ನೀಡಿದ್ದಾರೆ. ಶುಕ್ರವಾರ ಸುದ್ದಿಗಾರರ ಜತೆ ಮಾತನಾಡಿದ ಅವರು, ಮೋಜು, ಮಸ್ತಿ, ಭ್ರಷ್ಟಾಚಾರದ ಆರೋಪ ಹೊತ್ತುಕೊಂಡು ಜಾಮೀನಿನ ಮೇಲೆ ಹೊರಗೆ ಇರುವವರು ಯಾರು ಮತ್ತು ಅವರ ರಾಜಕೀಯ ಹಿನ್ನೆಲೆ ಏನೆಂಬುದು ಎಲ್ಲರಿಗೂ ಗೊತ್ತಿದೆ. ಇಂತಹವರಿಂದ ನಾನು ನನ್ನ ಇಲಾಖೆಯ ಬಗ್ಗೆ ಹೇಳಿಸಿಕೊಳ್ಳಬೇಕಾದ ಅಗತ್ಯ ಇಲ್ಲ ಎಂದರು. ಯಾರು ಜೈಲಿಗೆ ಹೋಗಿ ಜಾಮೀನಿನ ಮೇಲೆ ಬಂದಿದ್ದಾರೋ ಅಂತಹವರು ನನ್ನ ಬಗ್ಗೆ ಮಾತನಾಡಿದ್ದಾರೆ. ಜೈಲಿಗೆ ಹೋಗಿ ಜಾಮೀನಿನ ಮೇಲೆ ಬಂದವರು ಮೊದಲು ತಮ್ಮ ಹಿನ್ನೆಲೆ ಏನೆಂಬುದನ್ನು ಅರಿತು ಮಾತನಾಡಬೇಕು ಎಂದು ಕಿಡಿಕಾರಿದರು.

